ಪ್ರಧಾನ ದಿವಾಣಿ ನ್ಯಾಯಾಧಿಶರು ಹಾಗೂ ಪ್ರ. ದ. ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಚಿಕ್ಕೋಡಿ. ಸಾಃ ಚಿಕ್ಕೋಡಿ.

| | |
|---|---|
| ಓ ಎಸ್ ನಂ | 220/19 |
| ವಾದಿ ಸಂ | ಪಿ.ಡಬ್ಲ್ಯೂ1 |
| ದಿನಾಂಕ | 23-08-2022 |

ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಜೆ ಟಿ ಬಿ ನ್ಯಾಯವಾದಿಗಳಿಂದ

ನಾನು ಮರಾಠಿ ಮಾಧ್ಯಮದಲ್ಲಿ 4 ನೇ ತರಗತಿಯವರಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನ್ನ ತಂದೆ ಎಷ್ಟು ವಿದ್ಯಾಭ್ಯಾಸ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಾನು ಸಹಿಯನ್ನು ಮರಾಠಿ ಮಾಧ್ಯಮದಲ್ಲಿ ಮಾಡುತ್ತೇನೆ ಎಂದು ಸೂಚಿಸುವುದು ಸರಿ. ನನ್ನ ತಂದೆ ಆಂಗ್ಲ ಮಾಧ್ಯಮದಲ್ಲಿ ಸಹಿ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಯವರು ನಮ್ಮ ಜಮೀನಿನಲ್ಲಿ ಮನೆ ಕಟ್ಟುತ್ತಿರುವುದರಿಂದ ಪ್ರಸ್ತುತ ದಾವೆಯನ್ನು ಹೂಡಿರುತ್ತೇನೆ. ದಾವೆಯನ್ನು ಕಾರ್ತಿಕ ಮಾಳಿದ ಮೇಲೆ ಹೂಡಿರುತ್ತೇನೆ. ನಾನು ಮತ್ತು ಪ್ರತಿವಾದಿಯರು ಒಂದೇ ಸಮಾಜದವರು ಇರುತ್ತೇವೆ ಎಂದು ಸೂಚಿಸುವುದು ಸರಿ. ಪ್ರತಿವಾದಿಯರು ನನ್ನ ಖಾಸ ಅಣ್ಣತಮ್ಮಂದಿರು ಎಂದು ಸೂಚಿಸುವುದು ಸರಿಯಲ್ಲ, ಆದರೆ ದೂರಿನ ಅಣ್ಣ ತಮ್ಮಂದಿರು ಇರುತ್ತಾರೆ. ನನ್ನ ಮತ್ತು ಪ್ರತಿವಾದಿಯರ ಮಧ್ಯ ಯಾವುದೇ ಹಣಕಾಸಿನ ವ್ಯವಹಾರ ಇರುವುದಿಲ್ಲ. ನಮ್ಮ ಜಮೀನುಗಳ ಸರ್ವೆ ನಂಬರ 39,40 ಮತ್ತು 41 ಇರುತ್ತದೆ. ಸದರಿ ಜಮೀನು 34 ಗುಂಟೆ ಇರುತ್ತದೆ. ಸದರಿ ಜಮೀನು ನನ್ನ ಹಿರಿಯರಿಂದ ನನಗೆ ಬಂದಿರುತ್ತದೆ. ಸದರಿ ಜಮೀನು ಮೊದಲು ನನ್ನ ತಾತನ ಹೆಸರಿನಿಂದ ಇದ್ದು ನಂತರ ನನ್ನ ತಂದೆಯ ಹೆಸರಿಗೆ ಬಂದು ಈಗ ನನ್ನ ಹೆಸರಿಗೆ ಇರುತ್ತದೆ. ದಾವಾ ಸ್ವತ್ತು ಯಕ್ಸಂಬಾ ಗ್ರಾಮದ ಪೂರ್ವ ದಿಕ್ಕಿನಲ್ಲಿ ಗ್ರಾಮಕ್ಕೆ ಹೊಂದಿ ಕೊಂಡು ಇರುತ್ತದೆ ಎಂದು ಸೂಚಿಸುವುದು ಸರಿ. ಸದರಿ ಜಮೀನಿನಲ್ಲಿ ಸುಮಾರು 5-6 ಗುಡಿಸಲು ಇರುತ್ತವೆ. ಸದರಿ ಜಮೀನಿನಲ್ಲಿ ಇರುವ ಮನೆಗಳು ಸದರಿ ಜಮೀನಿನ ಪಶ್ಚಿಮ ದಿಕ್ಕಿನಲ್ಲಿ ಇರುತ್ತವೆ ಎಂದು ಸೂಚಿಸುವುದು ಸರಿ. ಸದರಿ ಮನೆಗಳು ಒಂದಕ್ಕೊಂದು ಹೊಂದಿ ಕೊಂಡು ಇರುತ್ತವೆ ಎಂದು ಸೂಚಿಸುವುದು ಸರಿ. ಸದರಿ ಮನೆಗಳ ಉತ್ತರ ದಿಕ್ಕಿನಲ್ಲಿ ರಸ್ತೆ ಇರುತ್ತದೆ ಎಂದು ಸೂಚಿಸುವುದು ಸರಿಯಲ್ಲ. ಸದರಿ ಮನೆಗಳು ಉತ್ತರಕ್ಕೆ ಮುಖ ಮಾಡಿ ಇರುತ್ತವೆ ಎಂದು ಸೂಚಿಸುವುದು ಸರಿ. ಸದರಿ ಮನೆಗಳ ಉತ್ತರ ದಿಕ್ಕಿನಲ್ಲಿ ರಸ್ತೆ ಇರುತ್ತದೆ ಎಂದು ಸೂಚಿಸುವುದು ಸರಿ. ಸದರಿ ಮನೆಗಳ ಮಾಳಿಗೆ ಮೇಲಿನ ನೀರು ಉತ್ತರ ದಿಕಿನಲ್ಲಿ ಬಿಳುತ್ತದೆ ಎಂದರೆ ಸಾಕ್ಷಿ ಎರಡು ಬದಿ ಬಿಳುತ್ತದೆ ಎಂದು ನುಡಿಯುತ್ತಾರೆ. ಪಶ್ಚಿಮದಿಂದ ಮೊದಲನೆ ಮನೆ ಇರುವ ಶಾಲನ್ ಮಾಳಿದ ಇರುತ್ತದೆ ಎಂದು ಸೂಚಿಸುವುದು ಸರಿ. ಸದರಿ ಮನೆಗೆ ಹೊಂದಿ ಕೊಂಡಂತೆ ಪಶ್ಚಿಮ ದಿಕ್ಕಿನಲ್ಲಿ ಪ್ರತಿವಾದಿಯರು ಮಾಳ್ಕಿ

ಮನೆ ಇರುತ್ತದೆ ಇರುತ್ತದೆ ಎಂದು ಸೂಚಿಸುವುದು ಸರಿ. ಅದಕ್ಕೆ ಹೊಂದಿ ಕೊಂಡಂತೆ ಆತ್ಮರಾಂ ಶೇಡಬಾಳೆ ಎನ್ನುವವರ ಮನೆ ಇರುತ್ತದೆ ಎಂದು ಸೂಚಿಸುವುದು ಸರಿ. ಅದರ ನಂತರ ಸುನೀಲ ಮಾಳಗೆ ಎನ್ನುವವರ ಮಾಲ್ಕಿ ಮನೆ ಇರುತ್ತದೆ ಎಂದು ಸೂಚಿಸುವುದು ಸರಿ. ಅದರ ನಂತರ ರಮೇಶ ಮಾಳಗೆ ಎನ್ನುವವರ ಮಾಲ್ಕಿ ಮನೆ ಇರುತ್ತದೆ ಎಂದು ಸೂಚಿಸುವುದು ಸರಿ. ಸದರಿ ಮನೆ ಆಚೆ ಅಪ್ಪಾಸಾಬ ಕಾಂಬಳೆ ಎನ್ನುವವರ ಮಾಲ್ಕಿ ನಿವೇಶನ ಇರುತ್ತದೆ ಎಂದು ಸೂಚಿಸುವುದು ಸರಿಯಲ್ಲ. ಸದರಿಯವರಿಗೆ ನಾನು ನಿವೇಶನವನ್ನು ಕ್ರಯ ಪತ್ರದ ಮೂಲಕ ನೀಡಿರುತ್ತೇನೆ ಎಂದು ಸೂಚಿಸುವುದು ಸರಿಯಲ್ಲ. ಸದರಿ ನಿವೇಶನದಲ್ಲಿ ಕಾಂಬಳೆ ಎನ್ನುವವರು ಕ್ರಯ ಪತ್ರದ ಆದಾರದ ಮೇಲೆ ಪ್ರತ್ಯಕ್ಷ ಸ್ವಾಧಿನತೆ ಇರುತ್ತಾರೆ ಎಂದು ಸೂಚಿಸುವುದು ಸರಿಯಲ್ಲ. ಅದರ ನಂತರ ಪಶ್ಚಿಮ ದಿಕ್ಕಿಗೆ ಚಿದಾನಂದ ಮಾಳಗೆ ಎನ್ನುವವರ ಮನೆ ಇರುತ್ತದೆ ಎಂದು ಸೂಚಿಸುವುದು ಸರಿ. ಸದರಿ ಮನೆಗಳಲ್ಲಿ ಅವರು ತಮ್ಮ ಕುಟುಂಬ ಸಮೇತ ವಾಸ ಮಾಡುತ್ತಿದ್ದಾರೆ ಎಂದು ಸೂಚಿಸುವುದು ಸರಿ. ಸದರಿ ಪ್ರತಿವಾದಿ ಇವರು ತನ್ನ ತಾತಾ ಲಕ್ಷ್ಮಣ ಈತನ ಕಾಲದಿಂದಲೂ ಸದರಿ ಮನೆಯಲ್ಲಿ ವಾಸ ಮಾಡುತ್ತಿದ್ದಾನೆ ಎಂದು ಸೂಚಿಸುವುದು ಸರಿ.

ಲಕ್ಷ್ಮಣ ಕಾಂಬಳೆ ಎನ್ನುವವರು 2014 ಸಾಲಿನಲ್ಲಿ ಮರಣ ಹೊಂದಿರುತ್ತಾರೆ ಎಂದು ಸೂಚಿಸುವುದು ಸರಿ. ಲಕ್ಷ್ಮಣ ಕಾಂಬಳೆ ಈತನ ಹೆಂಡತಿ ಹೆಸರು ಆನಂದಿಬಾಯಿ ಎಂದು ಇರುತ್ತದೆ ಎಂದು ಸೂಚಿಸುವುದು ಸರಿ. ಸದರಿ ಆನಂದಿಬಾಯಿ ತಮ್ಮ ಮನೆಯಲ್ಲಿ ಕುಟುಂಬದ ಹಿರಿಯ ಸದಸ್ಯಳು ಇರುತ್ತಾಳೆ ಎಂದು ಸೂಚಿಸುವುದು ಸರಿ. ಲಕ್ಷ್ಮಣ ಈತನಿಗೆ ಒಬ್ಬ ಮಗ ಅಶೋಕ ಮತ್ತು ಮೂರು ಜನ ಹೆಣ್ಣು ಮಕ್ಕಳು ಇರುತ್ತಾರೆ ಎಂದು ಸೂಚಿಸುವುದು ಸರಿ. ಅಶೋಕ ಈತನು ಮರಣ ಹೊಂದಿರುತ್ತಾರೆ ಎಂದು ಸೂಚಿಸುವುದು ಸರಿ. ಅವನ ಹೆಂಡತಿ ಹೆಸರು ವರ್ಷಾ ಎಂದು ಇರುತ್ತದೆ ಎಂದು ಸೂಚಿಸುವುದು ಸರಿ. ಅಶೋಕ ಮತ್ತು ವರ್ಷಾ ಇವರಿಗೆ ಕಾರ್ತಿಕ ಮತ್ತು ಕೀರ್ತಿರಾಜ ಎನ್ನುವ ಮಕ್ಕಳು ಇರುತ್ತಾರೆ ಎಂದು ಸೂಚಿಸುವುದು ಸರಿ. ಸದರಿ ಕಾರ್ತಿಕ ಮತ್ತು ಕೀರ್ತಿರಾಜ ಇವರು ದಾವೆ ಹೊಡುವ ಸಮಯದಲ್ಲಿ ಶಾಲೆಗೆ ಹೋಗುತ್ತಿದ್ದರು ಎಂದರೆ ಸಾಕ್ಷಿ ಕೀರ್ತಿರಾಜ ಈತನು ಶಾಲೆಗೆ ಹೋಗುತ್ತಿದ್ದನು ಕಾರ್ತಿಕ ಈತನು ಹೋಗುತ್ತಿರಲಿಲ್ಲ ಎಂದು ನುಡಿಯುತ್ತಾರೆ. ಕಾರ್ತಿಕ ಈತನು ಬೆಳಗಾವಿಯಲ್ಲಿ ಕಾಲೇಜು ವಿದ್ಯಾಬ್ಯಾಸ ಮಾಡುತ್ತಿದ್ದಾನೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಮನೆತನದಲ್ಲಿ ಆನಂದಿಬಾಯಿ ಮತ್ತು ವರ್ಷಾ ಇವರು ಕುಟುಂಬ ನಿರ್ವಹಣೆ ಮಾಡಿಕೊಂಡು ಹೋಗುತ್ತಾರೆ ಎಂದರೆ ಸಾಕ್ಷಿ ಇರಬಹುದು ಎಂದು ನುಡಿಯುತ್ತಾರೆ. ಸದರಿ ಮನೆಗಳು ಯಕ್ಸಂಬಾ ಗ್ರಾಮದ ವಾರ್ಡ ನಂಬರ 8 ರಲ್ಲಿ ಇರುತ್ತವೆ ಎಂದು ಸೂಚಿಸುವುದು ಸರಿ. ಸದರಿ ಎಲ್ಲಾ ಮನೆಗಳಿಗೂ ವಿಧ್ಯುತ ಸರಬರಾಜು ನಿಗಮದಿಂದ ವಿಧ್ಯುತ ಪೂರೈಸಲಾಗಿದೆ ಎಂದು ಸೂಚಿಸುವುದು ಸರಿ. ಸದರಿ ಎಲ್ಲಾ ಮನೆಗಳಿಗೂ ಯಕ್ಸಂಬಾ ಪಂಚಾಯತಿಯಿಂದ ಮನೆ ಸಂಖ್ಯೆಗಳನ್ನು ನೀಡಿ ಕರ ವಸೂಲಿ ಮಾಡುತ್ತಾರೆ ಎಂದು ಸೂಚಿಸುವುದು ಸರಿ. ಸದರಿ ಎಲ್ಲಾ

ಮನೆಗಳಿಗೂ ಪಂಚಾಯತಿಯಿಂದ ನೀರಿನ ಸರಬರಾಜು ವ್ಯವಸ್ಥೆ ಮಾಡಿರುತ್ತಾರೆ ಎಂದು ಸೂಚಿಸುವುದು ಸರಿ. ಸದರಿ ಮನೆಗಳ ಉತ್ತರಕ್ಕೆ ಇರುವ ರಸ್ತೆ ಬೀದಿ ದೀಪ ವ್ಯವಸ್ಥೆಯನ್ನು ಮಾಡಲಾಗಿದೆ ಎಂದು ಸೂಚಿಸುವುದು ಸರಿ. ಮನೆ ನೀರು ಮತ್ತು ಚರಂಡಿ ನೀರು ಹರಿಯಲು ಚರಂಡಿ ವ್ಯವಸ್ಥೆ ಮಾಡಲಾಗಿದೆ ಎಂದು ಸೂಚಿಸುವುದು ಸರಿಯಲ್ಲ. ಈ ಮೇಲೆ ಹೇಳಿರುವ ಮನೆಗಳನ್ನು ಹೊರತು ಪಡಿಸಿ ಬೇರೆ ಮನೆಗಳು ನಮ್ಮ ಜಮೀನಿನಲ್ಲಿ ಇರುವುದಿಲ್ಲ ಎಂದು ಸೂಚಿಸುವುದು ಸರಿ. ನನ್ನ ಮನೆ ನನ್ನ ಜಮೀನಿನಿಂದ ಸುಮಾರು 1 ಕಿ ಮೀ ಅಂತರದಲ್ಲಿ ರಿ ಸ ನಂಬರ 401 ರಲ್ಲಿ ಇರುತ್ತದೆ. ಸದರಿ ಮನೆ ನಮ್ಮ ಪೂರ್ವಜರಿಂದಲೂ ಸಹ ಇರುತ್ತದೆ. ಸದರಿ ಮನೆಯಲ್ಲಿ ನಾನು ನನ್ನ ತಾತಾನ ಕಾಲದಿಂದಲೂ ವಾಸ ಮಾಡುತ್ತಿದ್ದೇವೆ ಎಂದು ಸೂಚಿಸುವುದು ಸರಿ. ಸದರಿ ಮೇಲೆ ಹೇಳಿದ ಮನೆಗಳು ಸುಮಾರು 10-15 ವರ್ಷಗಳಿಂದ ಇರುತ್ತವೆ. ಸದರಿ ಮನೆಗಳು ಉತ್ತರಕ್ಕೆ ಇರುವ ರಸ್ತೆಯ ಆಚೆಗೆ ಪ್ರಭಾತ ಎನ್ನುವವರ ಜಮೀನುಗಳು ಇರುತ್ತವೆ ಎಂದು ಸೂಚಿಸುವುದು ಸರಿ. ಶೇಖರ ಪ್ರಭಾತ ಜಮೀನಿನಲ್ಲಿ ಸುಮಾರು 8 ಮನೆಗಳು ಇರುತ್ತವೆ ಎಂದು ಸೂಚಿಸುವುದು ಸರಿ. ಸದರಿ ಮನೆಗಳು ದಕ್ಷಿಣಕ್ಕೆ ಮುಖ ಮಾಡಿ ಇರುತ್ತವೆ ಎಂದರೆ ಸಾಕ್ಷಿ ಕೇಲವು ದಕ್ಷಿಣಕ್ಕೆ ಮುಖ ಮಾಡಿ ಇರುತ್ತವೆ ಎನ್ನೂ ಕೇಲವು ಉತ್ತರಕ್ಕೆ ಮುಖ ಮಾಡಿ ಇರುತ್ತವೆ ಎಂದು ನುಡಿಯುತ್ತಾರೆ. ಸದರಿ ಮನೆಗಳ ಪಶ್ಚಿಮಕ್ಕೆ ಕಲ್ಲೋಳ್ಳಿ ಯಕ್ಸಂಬಾ ರಸ್ತೆ ಇರುತ್ತದೆ ಎಂದು ಸೂಚಿಸುವುದು ಸರಿ. ಪ್ರತಿವಾದಿ ಮನೆ 40 X 20 ವಿಸ್ತೀರ್ಣ ಇರುತ್ತದೆ ಎಂದರೆ ಸಾಕ್ಷಿ ಇರಬಹುದು ಎಂದು ನುಡಿಯುತ್ತಾರೆ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ನೀಡಿಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮುಖಾಂತರ ಬೆರಳಚ್ಚು ಮಾಡಿಸಿ ಸಾಕ್ಷಿದಾರರಿಗೆ ಓದಿ ಹೇಳಲಾಯಿತು)

ಓ.ಹೇ.ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧಿಶರು,
ಚಿಕ್ಕೋಡಿ.